# ಏಳಯ್ಯ ಬೆಳಗಾಯಿತು ಬಿಸಿಲು ಮೈದೋರುತಿದೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref.1. The wordings given in yellow highlights are as per Ref. 2. The wordings in Ref. 3 are given in green highlights. Lyrics in all these versions are slightly different. Hence, they are given separately for the help of researchers. Further, it is noticed that the wordings in Ref. 1 and Ref. 3 are almost similar.
5. **Note:** Singer has followed lyrics as in Ref. 1.
6. **Note:** The Ankita is different in these references. We have considered Ref.3 as standard and taken that Ankita for listing.

| | |
|---|---|
| ರಾಗ: ಭೂಪಾಳಿ ತಾಳ: ಝಂಪೆ | ರಾಗ: ಉದಯರಾಗ ತಾಳ: ಝಂಪೆ |
| ಏಳಯ್ಯ ಬೆಳಗಾಯಿತು ‖ ಪ ‖ | ಏಳಯ್ಯ ಬೆಳಗಾಯಿತು |
| ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ | ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ |
| ಸುಳಿವು ದೋರಯ್ಯ ನಿನ್ನ ಹಾರೈಸಿ ನಿಂದಿಹರು | ಸುಳಿವು ದೋರೆಯ ನಿಮ್ಮ ಹಾರೈಸಿ ನಿಂದಾರೆ |
| ತಳುವ ಮಾಡದಿರಯ್ಯ ಸ್ವಾಮಿ ತಿರುಮಲೆ ರಾಯ | ತಡವ ಮಾಡದಿರಯ್ಯ ಸ್ವಾಮಿ ತಿರುಮಲೆ ರಾಯ |
| ಸೆಳೆಮಂಚದಿಂದಲೆ ಏಳು ‖ ೧ ‖ | ಸೆಳೆಮಂಚದಿಂದಲೆ ಏಳೋ |
| ವೇದವನು ತರಲೇಳು ಮಂದರವ ಪೊರಲೇಳು | ವೇದವನು ತರಲೇಳು ಮಂದರವ ಪೊರಲೇಳು |
| ಛೇದಿಸುತ ಅಸುರರನು ಭೂಮಿಯ ತರಲೇಳು | ಛೇದಿಸುತ ಅಸುರರನು ದಾಡೆಯಿಂ ತರಲೇಳು |
| ಕಾದಿ ಹಿರಣ್ಯಕನ ಕರುಳು ಕೊರಳೊಳಗೆ ಧರಿಸೇಳು | ಕಾದಿ ಹಿರಣ್ಯಕನ ಕರುಳು ಕೊರಳೊಳಗೆ ಧರಿಸೇಳು |
| ಕಾಯ್ದು ಬಲಿ ಬಾಗಿಲೊಳಗೇಳು ‖ ೨ ‖ | ಕಾಯ್ದು ಬಲಿ ಬಾಗಿಲದೊಳು |
| ಭೇದದಲಿ ಭೂಮಿಯ ತ್ರಿಪಾದದಿಂದಳೆಯೇಳು | ಭೇದಿಸಿ ಭೂಮಿ ತ್ರಿಪಾದದಿಂದಳಿಬೇಕು |
| ಛೇಧಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು | ಛೇಧಿಸಿ ಕ್ಷತ್ರಿಯರ ಕೊಡಲಿಂದ ಕಡಿಯೇಳು |
| ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು | ಸಾಧಿಸಿ ಶರಧಿಯಲಿ ಸೇತುವೆಯ ಕಟ್ಟೇಳು |
| ನಂದಗೋಪನ ಉದರದೊಳೇಳು ‖ ೩ ‖ | ನಂದಗೋಪನ ಉದರದಿ |

ಪುರ ಮೂರ ಗೆಲಬೇಕು ಅರಿವೆಯನು ಕಳೆದೇಳು
ದುರುಳರನು ಕೊಲಬೇಕು ತುರಗ ವಾಹನನಾಗು
ಪರಿ ಪರಿಯ ಕೆಲಸಗಳ ಮಾಡಲುದ್ಯೋಗಿಸದೆ
ಮರೆತು ನಿದ್ರೆಯ ಗೈವರೆ || ೪ ||

ಆಲದೆಲೆಯಿಂದೇಳು ಮಾಲಕುಮಿ ಬಂದಿಹಳು
ಹಾಲಗಡಲಿಂದೇಳು ಶ್ರೀದೇವಿ ನಿಂದಿಹಳು
ಕಾಲದಡೆಯಿಂದೇಳು ಭೂದೇವಿ ಬಂದಿಹಳು
ಸಾಲಮಂಚಗಳಿಂದಲಿ || ೫ ||

ನಾಭಿ ಕಮಲದಿ ಜನಿಸಿದ ಬ್ರಹ್ಮ ಬಂದಿಹನು
ಗಂಭೀರ ಗಾಯನದ ನಾರದನು ನಿಂದಿಹನು
ರಂಭೆ ಮೇನಕೆ ಮೊದಲು ನರ್ತನಕೆ ಐದಿಹರು
ಶಂಬರಾರಿ ಪಿತನೆ ಏಳು || ೬ ||

ರಾಜಸೂಯವ ಕೊಳಲು ವಾಯುಸುತ ಬಂದಿಹನು
ತೇಜಿಯಾಟಕೆ ಅರ್ಜುನನು ಕರೆಯೆ ಬಂದಿಹನು
ಸಾಜ ಧರ್ಮಜ ಅಗ್ರಪೂಜೆ ಮಾಡುವೆನೆಂದು
ಹೂಜಿಯನೆ ಪಿಡಿದುಕೊಂಡು || ೭ ||

ಉರಿಗೈಯನಟ್ಟಿದರೆ ಹರನೋಡಿ ಬಂದಿಹನು
ಗಿರಿಜೆ ವರವನು ಬೇಡೆ ಬಂದು ನಿಂದಿಹಳು
ಸುರ ಪಾರಿಜಾತವನು ಕೊಂಡು ಸುರರಾಜ
ಬಂದಿರುವನೇಳಯ್ಯ ಹರಿಯೆ || ೮ ||

ಕ್ಷಿತಿನಾಥ ನೀನೇಳು ಸತ್ಯಭಾಮೆ ಬಂದಿಹಳು
ಮತಿವಂತ ನೀನೇಳು ಜಾಂಬವತಿ ಬಂದಿಹಳು
ಗತಿವಂತ ನೀನೇಳು ಶ್ರೀ ತುಳಸಿ ಬಂದಿಹಳು
ಏಕಾಂತ ಸೇವೆಯ ಮಾಡಲು || ೯ ||

ದೇವ ನಿನ್ನಂಘ್ರಿಯನು ಪೂಜೆ ಮಾಡುವೆವೆಂದು
ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಾಪಹಾರಿ
ಸಾವಧಾನದಿ ಯಮುನೆ ತುಂಗೆ ಸರಸ್ವತೀ
ಭೀಮರಥಿ ನೇತ್ರಾವತಿಯು || ೧೦ ||

ಪುರ ಮೂರ ಗೆಲಬೇಕು ಅರಿವೆಯನೆ ಕಳೆಯೇಳು
ದುರುಳನ ಕೊಲ್ಲಬೇಕು ತುರಗ ವಾಹನನಾಗು
ಪರಿ ಪರಿಯ ಕೆಲಸಗಳು ಮಾಡಲುದ್ಯೋಗಿಸಿ
ಮರೆದು ನಿದ್ರೆಯ ಗೈವರೇ

ಆಲದೆಲೆಯಿಂದೇಳು ಮಾಲಕುಮಿ ಬಂದಾಳೆ
ಹಾಲ ನದಿಯಿಂದೇಳು ಶ್ರೀದೇವಿ ಬಂದಾಳೆ
ಕಾಲ ನದಿಯಿಂದೇಳು ಭೂದೇವಿ ಬಂದಾಳೆ
ಸಾಲಮಂಚಗಳಿಂದಲಿ

ನಾಭಿ ಕಮಲದಿ ಜನಿಸಿದ ಬ್ರಹ್ಮ ಬಂದಾನೆ
ಗಂಭೀರ ಗಾಯನದ ನಾರದನು ಬಂದಾನೆ
ರಂಭೆ ಮೇನಕೆ ಮೊದಲು ನರ್ತನಕೆ ಐದಾರೆ
ಶಂಬರಾರಿ ಪಿತನೆ ಏಳೋ

ರಾಜಸೂಯವ ಕೇಳೆ ವಾಯುಸುತ ಬಂದಾನೆ
ಅರ್ಜುನನು ರಥ ಹೂಡಬೇಕೆಂದು ನಿಂದಾನೆ
ಸಾಜ ಧರ್ಮಜ ಅಗ್ರಪೂಜೆ ಮಾಡುವೆನೆಂದು
ಮೂಜಿಯನೆ ಪಿಡಿದುಕೊಂಡು

ಉರಿಹಸ್ತನಟ್ಟಿದರೆ ಹರ ಓಡಿ ಬಂದಾನೆ
ಗಿರಿಜೆ ವರವನು ಬೇಡೆ ಬಂದು ಇದ್ದಾಳೆ
ಪಾರಿಜಾತವ ಕೊಂಡು ಸುರರಾಜ ಬಂದಾನೆ
ಗರುಡ ವಾಹನಕಾಗಿ

ಸತ್ಯನಾಥ ನೀನೇಳು ಸತ್ಯಭಾಮೆ ಬಂದಾಳೆ
ಮತಿವಂತ ನೀನೇಳು ಜಾಂಬವತಿ ಬಂದಾಳೆ
ಗತಿವಂತ ನೀನೇಳು ಶ್ರೀ ತುಳಸಿ ಬಂದಾಳೆ
ಕಾಂತ ಸೇವೆಯ ಮಾಡಲು

ದೇವ ನಿಮ್ಮಂಘ್ರಿ ಪೂಜೆಯ ಮಾಡಬೇಕೆಂದು
ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಾಪಹಾರಿ
ಸಾವಧಾನದಿ ಯಮುನೆ ತುಂಗೆ ಸರಸ್ವತೀ
ಭೀಮರಥಿ ನೇತ್ರಾವತಿಯು

ದುರಿತ ಬಂಧನವನ್ನು ಪರಿಹರಿಸಿದೆಯೊ ಸ್ವಾಮಿ
ದುರಿತಾರಿ ಮೇಲುಗಿರಿ ಶಿಖರದಲಿ ನಿಂತಿಹೆಯೊ
ದುರಿತ ತಾಪಕೆ ಚಂದ್ರ ನೀನೆನಿಸಿಕೊಂಡೆಯೊ
ಶ್ರೀ ಪುರಂದರ ವಿಠಲನೆ || ೧೧ ||

ದುರಿತ ಕಲಿ ಕರ್ಮವನು ತ್ವರಿತದಲಿ ಕೆಡಿಸುವನು
ದುರಿತಾರಿ ಮೇಲುಗಿರಿ ಶಿಖರದಲಿ ನಿಂತಿಹನು
ಪುರಂದರ ವಿಠಲ ರಾಯ
ನೀ ಬೆಳಗಾಯಿತೇಳಯ್ಯ

**Note:** Below given lyrics are as per Ref. 3 above.

ರಾಗ: ಸಾವೇರಿ ತಾಳ: ಝಂಪೆ

ಏಳಯ್ಯ ಬೆಳಗಾಯಿತು || ಪ ||

ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ
ಸುಳಿವು ದೋರೈ ನಿನ್ನ ಹಾರೈಸಿ ನಿಂದಿಹರು
ತಳುವ ಮಾಡದಿರಯ್ಯ ಸ್ವಾಮಿ ತಿರುಮಲೆ ರಾಯ
ಸೆಳೆಮಂಚದಿಂದಲೇಳು || ಅಪ ||

ವೇದವನು ತರಲೇಳು ಮಂದರವ ಹೊರಲೇಳು
ಛೇದಿಸುತ ಅಸುರರನು ಭೂಮಿಯ ತರಲೇಳು
ಕಾದಿ ಹಿರಣ್ಯಕನ ಕರುಳ ಕೊರಳೊಳಗೆ ಧರಿಸೇಳು
ಕಾದು ಬಲಿ ಬಾಗಿಲೊಳಗೆ
ಭೇದದಲಿ ಭೂಮಿಯ ತ್ರಿಪಾದದಿಂದಳೆಯೇಳು
ಛೇಧಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು
ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು
ನಂದಗೋಪನ ಉದರದಿ || ೧ ||

ಪುರ ಮೂರ ಗೆಲಬೇಕು ಅರಿವೆಯನು ಕಳೆದೇಳು
ದುರುಳರನು ಕೊಲಬೇಕು ತುರಗ ವಾಹನನಾಗು
ಪರಿ ಪರಿಯ ಕೆಲಸಗಳ ಮಾಡಲುದ್ಯೋಗಿಸದೆ
ಮರೆತು ನಿದ್ರೆಯ ಗೈವರೆ
ಉರಿಗೈಯನಟ್ಟಿದರೆ ಹರನೋಡಿ ಬಂದಿಹನು
ಗಿರಿಜೆ ವರವನು ಬೇಡೆ ಬೇಕೆಂದು ನಿಂದಿಹಳು
ಸುರ ಪಾರಿಜಾತವನು ಕೊಂಡು ಸುರರಾಜ
ಬಂದಿರುವನೇಳಯ್ಯ ಹರಿಯೆ || ೨ ||

ಆಲದೆಲೆಯಿಂದೇಳು ಮಾಲಕುಮಿ ಬಂದಿಹಳು

ಹಾಲುಗಡಲಿಂದೇಳು ಶ್ರೀದೇವಿ ನಿಂದಿಹಳು
ಕಾಲಹೆಡೆಯಿಂದೇಳು ಭೂದೇವಿ ಬಂದಿಹಳು
ಸಾಲಮಂಚಗಳಿಂದಲಿ
ಕ್ಷಿತಿನಾಥ ನೀನೇಳು ಸತ್ಯಭಾಮೆ ಬಂದಿಹಳು
ಮತಿವಂತ ನೀನೇಳು ಜಾಂಬವತಿ ಬಂದಿಹಳು
ಗತಿವಂತ ನೀನೇಳು ಶ್ರೀ ತುಳಸಿ ಬಂದಿಹಳು
ಏಕಾಂತ ಸೇವೆಯ ಮಾಡಲು || ೩ ||

ಅಂಬುರುಹದಿಂದ ಜನಿಸಿದ ಬ್ರಹ್ಮ ಬಂದಿಹನು
ಗಂಭೀರ ಗಾಯನದ ನಾರದನು ನಿಂದಿಹನು
ರಂಭೆ ಮೇನಕೆ ಮೊದಲು ನರ್ತನಕೆ ಐದಿಹರು
ಶಂಬರಾರಿ ಪಿತನೆ ಏಳು
ರಾಜಸೂಯವ ಕೊಳಲು ವಾಯುಸುತ ಬಂದಿಹನು
ತೇಜಿಯಾಟಕೆ ಅರ್ಜುನನು ಕರೆಯ ಬಂದಿಹನು
ಸಾಜ ಧರ್ಮಜ ಅಗ್ರಪೂಜೆ ಮಾಡುವೆನೆಂದು
ಹೂಜಿಯನೆ ಪಿಡಿದುಕೊಂಡು || ೪ ||

ದೇವ ನಿನ್ನಂಘ್ರಿಯನು ಪೂಜೆ ಮಾಡುವೆವೆಂದು
ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಪಹರಿ
ಸಾವಧಾನದಿ ಯಮುನೆ ತುಂಗೆ ಸರಸ್ವತೀ
ಭೀಮರಥಿ ನೇತ್ರಾವತಿಯು
ದುರಿತ ಬಂಧನವನ್ನು ಪರಿಹರಿಸಿದೆಯೊ ಸ್ವಾಮಿ
ದುರಿತ ದುಷ್ಕರ್ಮವನು ದೇವಾ ಎಂದರೆ ಸುಡುವೆ
ದುರಿತ ತಾಪಕೆ ಚಂದ್ರ ನೀನೆನಿಸಿಕೊಂಡೆಯೊ
ಶ್ರೀ ಪುರಂದರ ವಿಠಲನೆ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಉದಯರಾಗ ಪದ್ಧತಿಯಲ್ಲಿರುವ ಈ ಪದ ಸಡಿಲವಾದ ವಾರ್ಧಿಕ ಷಟ್ಪದಿಯ ರಚನೆ. ಸೃಷ್ಟಿಗೆ ಮೊದಲು ಅವ್ಯಾಕೃತಾವಸ್ಥೆಯಲ್ಲಿದ್ದ ಮೂಲ ಪ್ರಕೃತಿಯ ಮಡಿಲಿಂದ ಪರಮಾತ್ಮನು ಜಾಗ್ರತನಾಗಿ ಅಷ್ಟ ಮಹಾಕಾರ್ಯಗಳನ್ನು ಕೈಗೊಳ್ಳಬೇಕೆಂದು. ಅವನನ್ನು ದಾಸರು ಎಬ್ಬಿಸುತ್ತಿದ್ದಾರೆ. ವಿಷ್ಣುವಿನ ಮಹಿಮೆಯನ್ನು ಹೇಳುವುದೇ ಉದ್ದೇಶ. ಮೂರು ನುಡಿಗಳಲ್ಲಿ ದಶಾವತಾರದ ವರ್ಣನೆಯಿದೆ (2,3,4). ಅನಂತರ ಲಕ್ಷ್ಮಿಯ ಸಂಕೇತವಾದ ವಟಪತ್ರ, ಶ್ರೀದೇವಿಯ

ಪ್ರತೀಕವಾದ ಕ್ಷೀರಸಮುದ್ರ, ಭೂದೇವಿಯ ಸಂಕೇತವಾದ ಶೇಷಶಯ್ಯೆ ಇವುಗಳ ಉಲ್ಲೇಖವಿದೆ. ಮುಂದೆ ವಿಷ್ಣುವಿನ ಪರಿವಾರ, ವೈಭವ, ಸಾಹಸಗಳ ವರ್ಣನೆ ಬರುತ್ತದೆ.

**ತಳುವು** = ತಡ

**ಸೆಳೆಮಂಚ** = ಸೆಳೆಯಿಂದ ಮಾಡಿದ ತೂಗುವ ಮಂಚ

**ಉರಿಗೈಯ** = ಭಸ್ಮಾಸುರ.

ಶಿವನು ಭಸ್ಮ ಹಚ್ಚಿಕೊಳ್ಳುತ್ತಿರುವಾಗ ಅದರಲ್ಲಿಯ ಹರಳಿನಿಂದ ಹುಟ್ಟಿದ ಅಸುರ. ತಾನು ಇನ್ನೊಬ್ಬರ ತಲೆಯ ಮೇಲೆ ಕೈಯನ್ನು ಇರಿಸಿದರೆ, ಅವರು ಭಸ್ಮವಾಗಬೇಕೆಂಬ ವರವನ್ನು ಶಿವನಿಂದ ಪಡೆದು, ಅವನ ಮೇಲೆಯೇ ಪ್ರಯೋಗ ಮಾಡಹೋದನು. ಆಗ ಶ್ರೀಹರಿ ಮೋಹಿನಿ ರೂಪ ತಾಳಿ ಅವನ ಕೈಯನ್ನೇ ಅವನ ತಲೆಯ ಮೇಲಿರಿಸಲು ಹಚ್ಚಿ ಸುತ್ತು ಬೂದಿ ಮಾಡಿದನು.

**ಕಾಲ** = ಆದಿಶೇಷ

**ಮೇನಕೆ** = ಸ್ವರ್ಗ ಲೋಕದ ಅಪ್ಸರೆಯರಲ್ಲಿ ಒಬ್ಬಳು. ಇವಳು ಊರ್ಣಾಯು ಗಂಧರ್ವನ ಹೆಂಡತಿ. ಭೂಮಿಯ ಮೇಲೆ ನಡೆಯುವ ತಪೋಭಂಗಕ್ಕಾಗಿ ಇಂದ್ರನು ಇವಳನ್ನು ಕಲಿಸಿಕೊಡುವ ಕಥೆಗಳು ಬಹಳ ಇವೆ. ಇವಳು ಶಕುಂತಲೆ ಮತ್ತು ದ್ರುಪದ ರಾಜನ ತಾಯಿ.

**ಶಂಬರಾರಿ = ಕಾಮ : -** ಶಂಬರನು ಒಬ್ಬ ರಾಕ್ಷಸ. ಕೃಷ್ಣನ ಮಗನಾದ ಪ್ರದ್ಯುಮ್ನನಿಂದ ತನಗೆ ಸಾವು ಒದಗುವದೆಂದು ತಿಳಿದು ಆತನನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿ ಕೊನೆಗೆ ತಾನೇ ಅವನಿಂದ ಹತನಾದ.

**ತೇಜಿಯಾಟ** = ಸಾರಥಿತನ

**Classification:** Keerthane
**Ankita:** sri purandara vittala
**Location:** NA
**Category:** Udaya Geete, Srinivasa Stuti, dashavatara, Vishnu stuti
**Sub-Category:** Vishnu, srinivasa, beligge, mancha, Tirupati, veda, asura, bali, bagilu, bhumi, Samudra, kudure, nidde, aladele, Lakshmi, halu, gange, brahma, padma, narada, hanuma, pandava, puje, kai, shiva, Parvati, parijatha, garuda, sura, Krishna, tulasi, deva, anghri, nadi, dashavatara, karma, Chandra,
**Pravachana:** NA
**Explanation:** NA